ಸರ್ಕಾರಿ ನೌಕರರ ವರ್ಗಾವಣೆ ನೀತಿ

23(29) -ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002ನೇ ಸಾಲಿನಲ್ಲಿ ಎಷ್ಟು ಸರ್ಕಾರಿ ನೌಕರರ ವರ್ಗಾವಣೆಯನ್ನು ಮಾಡಲಾಗಿದೆ?

ಆ) ವರ್ಗಾವಣೆಗೆ ಸಂಬಂಧಪಟ್ಟಂತೆ ಹಾರನಹಳ್ಳಿ ರಾಮಸ್ವಾಮಿ ಆಯೋಗವು ನೀಡಿದ ಶಿಫಾರಸ್ಸುಗಳನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿದೆಯೇ?

ಇ) ವರ್ಗಾವಣೆಗೆ ಸಂಬಂಧಪಟ್ಟಂತೆ ಸರ್ಕಾರ ಹಿಂದೆ ರೂಪಿಸಿದ್ದ ನೀತಿಯನ್ನು ಮಾರ್ಪಾಡು ಮಾಡಲಾಗಿದೆಯೇ?

ಈ) ಹಲವಾರು ಇಲಾಖೆಗಳಲ್ಲಿ ಮನಸ್ಸಿಗೆ ಬಂದ ರೀತಿಯಲ್ಲಿ ವರ್ಗಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ವರ್ಗಾವಣೆಯಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಊ) ವರ್ಗಾವಣೆಗಳನ್ನು ಅಂತಿಮವಾಗಿ ಯಾವಾಗ ಕೊನೆಗೊಳಿಸಲಾಗುತ್ತಿದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು)

ಅ) 16,830

ಆ) ಹೌದು

ಇ) ಹೌದು, ದಿನಾಂಕ 22-11-2001 ರ ಸರ್ಕಾರಿ ಆದೇಶ ಸಂ.ಡಿಪಿಎಆರ್ 4 ಎಸ್‌ಟಿಆರ್ 2001 ರಲ್ಲಿ ಹೊಸ ವರ್ಗಾವಣೆ ನೀತಿ ಒಳಗೊಂಡಿದೆ.

ಈ) ಇಲ್ಲ.

ಉ) ಮೇಲಿನ 'ಈ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಊ) ಸದರಿ ನೀತಿಯ ಪ್ರಕಾರ ಸರ್ಕಾರಿ ನೌಕರರ ವರ್ಗಾವಣೆಗಳನ್ನು ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮಾತ್ರ ಮಾಡಬೇಕಾಗುತ್ತದೆ. ಆದರೆ, ಪ್ರಸಕ್ತ ಸಾಲಿನಲ್ಲಿ ಇದನ್ನು ಅನಿವಾರ್ಯ ಕಾರಣಗಳಿಂದಾಗಿ ದಿನಾಂಕ 30-6-2002 ರವರೆಗೆ ವಿಸ್ತರಿಸಲಾಗಿತ್ತು.

ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ ಬಗ್ಗೆ

24(30) -ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುತ್ ದರಗಳನ್ನು ಏರಿಸಬೇಕೆಂದು ಕರ್ನಾಟಕ ವಿದ್ಯುತ್ ರೆಗ್ಯುಲೇಟರಿ ಕಮೀಷನ್ ಶಿಪಾರಸ್ಸು ಮಾಡಿದೆಯೆ;

ಆ) ಈಗಿನ ವಿದ್ಯುತ್ ದರವನ್ನು ಮತ್ತೆ ಏರಿಸುವ ಬಗ್ಗೆ ತೀವ್ರ ವಿರೋಧ ಜನತೆಯಿಂದ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ವಿದ್ಯುತ್ ದರವನ್ನು ಏರಿಸುವ ಪ್ರಸ್ತಾವನೆಯನ್ನು ಸರ್ಕಾರ ಕೈ ಬಿಡಲು ತೀರ್ಮಾನಿಸಿದೆಯೇ?

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು.

ಆ) ಬಂದಿದೆ.

ಇ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ರಾಜ್ಯದಲ್ಲಿ ವಿದ್ಯುತ್ ದರ ಏರಿಸುವ ವಿಚಾರದಲ್ಲಿ ಗ್ರಾಹಕರಿಂದ ಬಂದ ಅಹವಾಲುಗಳನ್ನು ಪರಿಶೀಲಿಸಿ ಸಾರ್ವಜನಿಕ ವಿಚಾರಣೆಯನ್ನು ಸಹ ನಡೆಸಿ ವಿದ್ಯುತ್ ದರ ಏರಿಕೆಗೆ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ದರವನ್ನು ಏರಿಸಲಾಗಿದೆ. ಆದ್ದರಿಂದ, ಈ ಪ್ರಸ್ತಾವನೆಯನ್ನು ಕೈ ಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕ. ರಾ. ರ. ಸಾ ಸಂಸ್ಥೆಯ ಘಟಕಗಳು

25(2) -ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಘಟಕಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಘಟಕಗಳು ಲಾಭದಲ್ಲಿರುತ್ತವೆ; ಎಷ್ಟು ಘಟಕಗಳು ನಷ್ಟದಲ್ಲಿರುತ್ತವೆ.

ಆ) ಈ ನಷ್ಟದಲ್ಲಿರುವ ಘಟಕಗಳನ್ನು ಲಾಭದಾಯಕವನ್ನಾಗಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ರಮಾನಾಥ ರೈ ಸಾರಿಗೆ ಸಚಿವರು

ಅ) ರಾಜ್ಯದಲ್ಲಿನ 4 ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಒಟ್ಟು 137 ಘಟಕಗಳಿವೆ. 2001-02 ನೇ ಸಾಲಿನಲ್ಲಿ ಇವುಗಳ ಪೈಕಿ 12 ಘಟಕಗಳು ಲಾಭದಲ್ಲಿದ್ದು ಉಳಿದ 95 ಘಟಕಗಳು ಸಾರಿಗೆ ಆದಾಯದ ಮೇಲೆ ನಷ್ಟದಲ್ಲಿರುತ್ತವೆ.

ಆ) ತನ್ನ ಕಾರ್ಯಚರಣೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಈ ಕೆಳಗಿನ ಕೆಲವೊಂದು ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ವೋಲ್ವೋ ಮತ್ತು ಪಿ-5000 ಮಾದರಿಯ ಆಧುನಿಕ ಅಲ್ಟ್ರಾ ಡಿಲೆಕ್ಸ್ ಪ್ಲಸ್ ವಾಹನಗಳನ್ನು ಪ್ರಾರಂಭಿಸುವುದು.
2) ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದ 20 ರಿಂದ 40 ಕಿ.ಮೀ ಗಳವರೆಗೆ 2 ಬಾಗಿಲುಗಳುಳ್ಳ ವಾಹನಗಳನ್ನು ಆಚರಣೆಗೊಳಿಸುವುದು.
3) ಮುಂಗಡ ಟಿಕೇಟು ಪಡೆದಿರುವ ಪ್ರಯಾಣಿಕರಿಗೆ ಅವರ ಮನೆಯಿಂದ ಬಸ್ ನಿಲ್ದಾಣದವರೆಗೂ ಉಚಿತ ಪ್ರಯಾಣ ಕಲ್ಪಿಸುವುದು.
4. ಗ್ರಾಮಾಂತರ ಪ್ರದೇಶಗಳಲ್ಲಿ 2 ರಿಂದ 23 ನೇ ಸ್ಟೇಜಿನವರೆಗೆ ಪ್ರಯಾಣ ಮಾಡುವ ಪ್ರಯಾಣಿಕರಿಗೆ ಮಾಸಿಕ ಟಿಕೆಟುಗಳ ಸೌಲಭ್ಯವನ್ನು ಒದಗಿಸುವುದು.
5. ಗಣಕೀಕೃತ:ಮಾನವ ಚಾಲಿತ ಮುಂಗಡ ಟಿಕೆಟ್ ಕಾದಿರಿಸುವ ಕೌಂಟರುಗಳನ್ನು ರಾಜ್ಯದಲ್ಲಿ ಹಾಗೂ ನೆರೆ ರಾಜ್ಯದಲ್ಲಿ ಸ್ಥಾಪಿಸುವುದು.